# ಓಲ್ಡ್ ಚೈನಾ ಸಿಲ್ಕ್ ರೋಡ್!



ಗ್ನತಾಂಗ್ ಎಂಬ ಪುಟ್ಟ ಹಳ್ಳಿ





**ಬೆಳಗ್ಗಿನ ವಾತಾವರಣ ಮಂಜಿನ ಹೊದಿಕೆಯಿಲ್ಲದೆ ಶುಭ್ರವಾಗಿದ್ದರಿಂದ ಸಿಲ್ಕ್‌ರೋಡ್‌ನ ಪೂರ್ಣ ಖುಷಿ ಸಿಕ್ಕಿತು. ಬೆಟ್ಟದ ತುದಿಯಿಂದ 35 ತಿರುವುಗಳು ಮತ್ತು ಕೊನೆಯಲ್ಲಿ ಜುಲುಕ್ ಹಳ್ಳಿ ನಯನ ಮನೋಹರವಾಗಿ ಕಂಡಿತು.**

■ ಚಿತ್ರ– ಲೇಖನ: **ಸಂಪತ್‌ಕುಮಾರ್ ಜೈನ್**

**ಯೂ**ತ್ ಹಾಸ್ಟೆಲ್ ಅಸೋಸಿಯೇಶನ್ ಇಂಡಿಯಾ ವತಿಯಿಂದ ಹಮ್ಮಿಕೊಳ್ಳುವ ಟ್ರೆಕ್ಕಿಂಗ್‌ನಲ್ಲಿ ಭಾಗವಹಿಸುವ ಕನಸು ನಮ್ಮದಾಗಿತ್ತು. ತಂಡದ (ಡಾ. ಜಗನ್ನಾಥ ರೈ, ವಕೀಲ ಅಮರೇಂದ್ರ ಜೈನ್, ಹರೀಶ್ ಕುಮಾರ್ ಕೈಕಂಬ, ದೇವರಾಜ್ ಅಂಚನ್, ಮತ್ತು ಪವನ್ ಜೈನ್) ಸಿಕ್ಕಿಂ, ಭೂತಾನ್ ದೇಶ ಮತ್ತು ಚೀನಾ ದೇಶದ ಗಡಿ ಭಾಗದಲ್ಲಿರುವ ಹಳೆಯ ಚೀನಾ ಸಿಲ್ಕ್‌ರೋಡ್ ಸುತ್ತಲು ಹೊರಟೆವು.

ಭಾರತ ಮತ್ತು ಚೀನಾ ಮಧ್ಯೆ ರೇಷ್ಮೆಯ ವ್ಯಾಪಾರಕ್ಕೆ ಇದ್ದ ದಾರಿ ಇದು. ಭಾರತೀಯ ವ್ಯಾಪಾರಿಗಳು ಚೀನಾಕ್ಕೆ ಈ ದಾರಿಯಲ್ಲೇ ಹೋಗಿ ಬರುತ್ತಿದ್ದರು. ಹೀಗಾಗಿ ಇದಕ್ಕೆ ಓಲ್ಡ್ ಚೈನಾ ಸಿಲ್ಕ್ ರೋಡ್ ಎಂದು ಹೆಸರು.

ಉಡುಪಿಯಿಂದ ರೈಲಿನ ಮೂಲಕ ಮುಂಬೈಗೆ, ಅಲ್ಲಿಂದ ಕೋಲ್ಕತ್ತಾಗೆ 38 ಗಂಟೆಗಳ ಪ್ರಯಾಣ. ಕೋಲ್ಕತ್ತಾದಿಂದ ನ್ಯೂ ಜಲಪೈಗುರಿಗೆ 10 ಗಂಟೆಯ ರೈಲಿನ ಪ್ರಯಾಣ. ನಾವು ಅಲ್ಲಿಗೆ ತಲುಪಿದ್ದು ಬೆಳಗ್ಗಿನ ಜಾವ 7 ಗಂಟೆಗೆ.